

ಡಾ. ಎಸ್. ರಾಮಮೂರ್ತಿ

# 18-9-2014ರಿಂದ 24-9-2014ರವರೆಗೆ




ವಾರದ ಆರಂಭದಲ್ಲಿ ಉತ್ಸಾಹ ಕುಗ್ಗುವುದು. ಮಕ್ಕಳು ಹೇಳಿದಂತೆ ನಡೆದುಕೊಳ್ಳುವುದಿಲ್ಲ. ಲೆಕ್ಕಪತ್ರದಲ್ಲಿ ಒತ್ತಡ. ವೃತ್ತಿಯಲ್ಲಿ ಹಿನ್ನಡೆ. ವಾರದ ಮಧ್ಯಭಾಗದಿಂದ ಸಮಾಧಾನ. ಕೆಲಸ ಕಾರ್ಯಗಳು ಸಫಲವಾಗುವುದು. ವ್ಯಾಪಾರದಲ್ಲಿ ನಿರೀಕ್ಷಿತ ಲಾಭ. ಅಧ್ಯಯನದಲ್ಲಿ ಮುನ್ನಡೆ. ಕುಟುಂಬದಲ್ಲಿ ಶಾಂತ ವಾತಾವರಣ. ಶುಭದಿನ: 21; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಮನಃಶಾಂತಿ. ಶ್ರಮವಿಲ್ಲದೆ ಕಾರ್ಯ ಸಿದ್ಧಿ. ಲೇವಾದೇವಿಗಳಲ್ಲಿ ಲಾಭ. ಪ್ರೀತಿಪಾತ್ರರ ಭೇಟಿ. ಹಿರಿಯರಿಂದ ಸಲಹೆ. ಆಭರಣ ಖರೀದಿ. ಕೋಪದ ಮಾತುಗಳು. ಆರೋಗ್ಯ ವ್ಯತ್ಯಯ. ಉದ್ಯೋಗದಲ್ಲಿ ಅಶಾಂತಿ. ವ್ಯಾಪಾರದಲ್ಲಿ ಹಿನ್ನಡೆ. ವಿರೋಧಿಗಳಿಂದ ತೊಂದರೆ. ವಾರಾಂತ್ಯದಲ್ಲಿ ಸಮಾಧಾನ, ಧೈರ್ಯ. ಶುಭದಿನ: 19; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಸೌಖ್ಯ. ನಿರೀಕ್ಷಿತ ಸಂದೇಶಗಳ ಆಗಮನ. ಉದ್ಯೋಗದಲ್ಲಿ ಮುನ್ನಡೆ. ವ್ಯಾಪಾರದಲ್ಲಿ ಸೂಕ್ತ ಲಾಭ. ಗೃಹ ನಿರ್ಮಾಣ ಚಿಂತನೆ. ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ, ಹಿತವಾರ್ತೆ. ವಾರಾಂತ್ಯದಲ್ಲಿ ಶ್ರಮ ಹೆಚ್ಚಾಗುವುದು. ವೃತ್ತಿ ವಹಿವಾಟುಗಳಲ್ಲಿ ಹಿನ್ನಡೆ, ಅನಾರೋಗ್ಯ. ಅಕಾಲ ಪ್ರಯಾಣ. ಶುಭದಿನ: 20; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಭಯ. ಬರವಣಿಗೆಯಲ್ಲಿ ತಪ್ಪಾಗುವ ಸಾಧ್ಯತೆ. ಒತ್ತಡ ಉಂಟು ಮಾಡುವ ಸಂದೇಶಗಳು. ಉದ್ಯೋಗದಲ್ಲಿ ಅಶಾಂತಿ. ಕೋಪ ಹೆಚ್ಚುವುದು. ವಾರದ ಮಧ್ಯಭಾಗದಿಂದ ಅನುಕೂಲ, ಅಭಿವೃದ್ಧಿ. ನಿರೀಕ್ಷೆಯಂತೆ ನಡೆಯುವ ಕಾರ್ಯಗಳು. ಲೇವಾದೇವಿಗಳಲ್ಲಿ ಲಾಭ. ಹಿರಿಯರಿಂದ ಸಹಾಯ. ಪ್ರಯಾಣ ಸೌಖ್ಯ. ಶುಭದಿನ: 22; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಪೂರ್ಣವಾಗದ ಕಾರ್ಯಗಳು. ಬರಬೇಕಾದ ಹಣ ಬರುವುದಿಲ್ಲ. ಮಕ್ಕಳಿಗಾಗಿ ಖರ್ಚು. ವ್ಯಾಪಾರದಲ್ಲಿ ಹಿನ್ನಡೆ, ಶತ್ರು ಭೀತಿ. ವಾರದ ಮಧ್ಯಭಾಗದಿಂದ ಚೇತರಿಕೆ. ಸ್ಥಿರ ಮನಸ್ಸು. ಉದ್ಯೋಗದಲ್ಲಿ ಮುನ್ನಡೆ. ಆತ್ಮೀಯರೊಡನೆ ಚರ್ಚೆ. ವಾಹನ ಸೌಖ್ಯ. ಲೇವಾದೇವಿಗಳಲ್ಲಿ ಲಾಭ. ಹಿತಕರ ಸಂದೇಶ. ಶುಭದಿನ: 22; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಸಂತಸ, ಇಷ್ಟಾರ್ಥ ಸಿದ್ಧಿ. ಸರಾಗವಾಗಿ ನಡೆಯುವ ಕಾರ್ಯಗಳು. ಲೇವಾದೇವಿಗಳಲ್ಲಿ ಲಾಭ ವೃದ್ಧಿ. ಸಭೆ ಸಮಾರಂಭಗಳಲ್ಲಿ ಭಾಗವಹಿಸುವಿಕೆ. ವಾರದ ಮಧ್ಯಭಾಗದಲ್ಲಿ ಸೋಮಾರಿತನ. ಅನಾವಶ್ಯಕ ಖರೀದಿ. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ಹಿರಿಯರೊಂದಿಗೆ ವಿವಾದ. ವಾರಾಂತ್ಯದಲ್ಲಿ ಸುಧಾರಣೆ. ಶುಭದಿನ: 19; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಅನುಕೂಲ. ಪ್ರಯಾಣ ಸೌಖ್ಯ. ಉದ್ಯೋಗದಲ್ಲಿ ಮನಃಶಾಂತಿ. ಅಧಿಕಾರಿ ವರ್ಗದವರಿಂದ ಪ್ರಶಂಸೆ. ಲೇವಾದೇವಿಗಳಲ್ಲಿ ಲಾಭ ವೃದ್ಧಿ. ವಿರೋಧಿಗಳಿಗೆ ಮುಖ ಭಂಗ. ಪ್ರೀತಿ ಪಾತ್ರರ ಭೇಟಿ. ಗಣ್ಯರಿಂದ ಸಲಹೆ. ವಾರಾಂತ್ಯದಲ್ಲಿ ಆಲಸ್ಯ. ಅನಾವಶ್ಯಕ ಖರ್ಚು. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ಅಹಿತ ಭೋಜನ. ಶುಭದಿನ: 20; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಒತ್ತಡ. ಅನಾವಶ್ಯಕ ಖರ್ಚು. ಕೆಲಸ ಕಾರ್ಯಗಳಲ್ಲಿ ತಪ್ಪಾಗುವಿಕೆ. ವ್ಯಾಪಾರದಲ್ಲಿ ಹಾನಿ. ಅಹಿತ ಸುದ್ದಿ. ಸಣ್ಣಪುಟ್ಟ ಪೆಟ್ಟಾಗುವ ಸಂಭವ. ವಾರದ ಮಧ್ಯದಿಂದ ಸಮಾಧಾನ. ಮನೋಬಲ ವೃದ್ಧಿ. ವೃತ್ತಿಯಲ್ಲಿ ಮುನ್ನಡೆ. ಲೆಕ್ಕಪತ್ರ ವ್ಯವಹಾರಗಳಲ್ಲಿ ಅನುಮಾನ ಬಗೆಹರಿಯುವುದು. ವಾಹನ ಸೌಖ್ಯ. ಶುಭದಿನ: 22; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಧೈರ್ಯ ಕುಗ್ಗುವುದು. ಭೂ ವ್ಯವಹಾರಗಳಲ್ಲಿ ಕಲಹ. ಅಕಾಲ ಭೋಜನ. ಹಿರಿಯರ ಮೇಲೆ ಕೋಪ. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ವಾರದ ಮಧ್ಯಭಾಗದಿಂದ ಸೌಖ್ಯ. ತಡೆಯಿಲ್ಲದೆ ನಡೆಯುವ ಕಾರ್ಯಗಳು. ಆಟ ಪಾಠಗಳಲ್ಲಿ ಮುನ್ನಡೆ. ವ್ಯಾಪಾರದಲ್ಲಿ ಲಾಭ. ಕುಟುಂಬ ಸದಸ್ಯರಲ್ಲಿ ಒಮ್ಮತ. ಹಿತಕರ ವಾರ್ತೆ. ಶುಭದಿನ: 22; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಮನಃಶಾಂತಿ. ಸಂಶೋಧನೆ ಕಾರ್ಯಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಮನಃಶಾಂತಿ. ವ್ಯಾಪಾರದಲ್ಲಿ ಸೂಕ್ತ ಲಾಭ. ಆಪ್ತರ ಭೇಟಿ. ವಾರದ ಮಧ್ಯಭಾಗದಲ್ಲಿ ಶ್ರಮ ಹೆಚ್ಚುವುದು. ನಿದ್ರಾಹೀನತೆ. ಕಾರ್ಯ ಕಲಾಪಗಳಲ್ಲಿ ಹಿನ್ನಡೆ. ಲೇವಾದೇವಿಗಳಲ್ಲಿ ಹಾನಿ. ಅನಾರೋಗ್ಯ. ವಾರಾಂತ್ಯದಲ್ಲಿ ಒತ್ತಡ ನಿವಾರಣೆ. ಶುಭದಿನ: 19; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಸೌಖ್ಯ. ಸಮಯಕ್ಕೆ ಸರಿಯಾಗಿ ಮುಗಿಯುವ ಕಾರ್ಯಗಳು. ಮನಃಸ್ತಾಪಗಳು ದೂರವಾಗುವುದು. ಪ್ರಯಾಣ ಸೌಖ್ಯ. ಕ್ರಯ ವಿಕ್ರಯ, ಒಪ್ಪಂದ ವ್ಯವಹಾರಗಳಲ್ಲಿ ಲಾಭ. ವಸ್ತ್ರಾಭರಣ ಖರೀದಿ ಚಿಂತನೆ. ಆಪ್ತರ ಆಗಮನ. ವಾರಾಂತ್ಯದಲ್ಲಿ ಮನೋಬಲ ಕುಗ್ಗುವುದು. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ಶುಭದಿನ: 20; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಏನಾದರೊಂದು ಚಿಂತೆ. ಕೆಲಸದಲ್ಲಿ ತಪ್ಪಾಗುವ ಸಂಭವ. ಅಧ್ಯಯನದಲ್ಲಿ ನಿರಾಸಕ್ತಿ. ಲೇವಾದೇವಿಗಳಲ್ಲಿ ಹಾನಿ. ಚಂಚಲ ಮನಸ್ಸು. ವಾರದ ಮಧ್ಯಭಾಗದಿಂದ ಚೇತರಿಕೆ. ವೃತ್ತಿ ಪ್ರವೃತ್ತಿಗಳಲ್ಲಿ ಸಫಲತೆ. ಮಿತ್ರರಿಂದ ಸಹಕಾರ. ಹಿಂದಿನ ತಕರಾರುಗಳು ಬಗೆಹರಿಯುವುದು. ಶುಭದಿನ: 22; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ